

ಅಂಗಡಿಯಿಟ್ಟ ಈತ ದೊಡ್ಡ ಮೆಂಟಲ್ ಎಂದು ಊರವರೆಲ್ಲ ಮಾತನಾಡಿಕೊಂಡಿದ್ದುಂಟು. ಆದರವರ ಊಹೆಗೆ ವ್ಯತಿರಿಕ್ತವಾಗಿ ರಫೀಕನಿಗೆ ಭರಪೂರ ವ್ಯಾಪಾರ ಶುರುವಾಗಿದ್ದು ರಫೀಕನಿಗೂ ಸೋಜಿಗ. ಭಾನುವಾರದ ಸಂತೆ ನಡೆಯುವ ಸಂತೆಕಟ್ಟೆಯ ಎದುರಾ ಎದುರಿಗೆ ರಫೀಕನ ಮೊಬೈಲ್ ದುಖಾನ್ ಇದ್ದದ್ದು. ನೀಲಿ ಬಣ್ಣದ ಸ್ಯಾಮ್ಸಂಗ್ ಬೋರ್ಡಿನಲ್ಲಿ ಕೆಂಪು ಸ್ಟಿಕರ್ ಅಂಟಿಸಿದ್ದ 'ಚಂದಾವರ ಮೊಬೈಲ್ ಪಾಯಿಂಟ್' ಅಂತ. ಅವನದು ಬರೀ ಚೈನಾ ಸೆಟ್ ಮಾರುವ ಅಂಗಡಿಯಾಗಿರಲಿಲ್ಲ. ಮೊಬೈಲ್ ರಿಪೇರಿಯನ್ನೂ ಆತ ಕಲಿತಿದ್ದ. ಕಡಿಮೆ ಬೆಲೆಯ ಇಯರ್ ಫೋನ್, ಬ್ಲೂಟುತ್, ಸ್ಪೀಕರ್, ಚಾರ್ಜರ್, ಹೀಗೆ ತರಹೇವಾರಿ ಮೊಬೈಲ್ ಸಂಬಂಧಿ ಸಾಮಾನುಗಳನ್ನೆಲ್ಲ ಇಟ್ಟುಕೊಂಡಿದ್ದ.

'ನಾನೇನ್ ಭಟ್ಕಳದಿಂದ ತಂದು ಮಾರ್ತಿನಿ ಅಂದ್ಕೊಂಡೆ? ಎಲ್ಲಾ ಹೊರಗಿನ ಐಟಮ್ ತಮ್ಮ ಇದು. ಮುಂಬೈನಲ್ಲಿ ನನ್ನ ದೋಸ್ತಾನೇ ಡೀಲರ್' ಎಂದು ತನ್ನ ಐಟಮ್‌ಗಳ ಮೇಲೆ ಅನುಮಾನ ತೋರಿಸಿದವರಿಗೆಲ್ಲ ಖಡಕ್ ಜವಾಬು ನೀಡುತ್ತಿದ್ದ. ಅದರ ಜೊತೆಗೆ ಅಂಗಡಿಗೆ ಬಂದವರಿಗೆಲ್ಲ ಪ್ರತಿದಿನ ಬದಲಾಗುತ್ತಿರುವ ತಂತ್ರಜ್ಞಾನದ ಬಗ್ಗೆ ಬಿಟ್ಟಿ ಉಪದೇಶ ಬೇರೆ ಕೊಡುತ್ತಿದ್ದ. ಸ್ಮಾರ್ಟ್‌ಫೋನ್ ಇರುವವರಿಗೆಲ್ಲ ಜಿ ಮೇಲ್ ಅಕೌಂಟ್ ಮಾಡಿಕೊಡುವುದು, ವಾಟ್ಸ್ ಆ್ಯಪ್, ಫೇಸ್‌ಬುಕ್ ಬಳಕೆ ಹೇಳಿಕೊಡುವುದು, ತರಹೇವಾರಿ ಗೇಮ್ಸ್ ಅನ್ನು ಮೊಬೈಲ್‌ಗೆ ಇಳಿಸಿಕೊಡುವುದು ಅವನ ಸೇವೆಗಳು ನೂರಾರು.

ರಫೀಕನ ಮೊಬೈಲ್ ದುಖಾನಿನಿಂದ ಸುತ್ತಲಿನ ಜನರಿಗೆ ಮೊಬೈಲ್ ಸಂಬಂಧಿ ಕೆಲಸಗಳಿಗೆ ದೂರದ ಕುಮಟಾ, ಹೊನ್ನಾವರಕ್ಕೆ ಅಲೆಯುವುದು ತಪ್ಪಿತು. ಅಲ್ಲಿ ಪೇಟೆಯಲ್ಲಿ ಇವರ ಚಿಕ್ಕ ಪುಟ್ಟ ಅನುಮಾನಗಳನ್ನು ಬಗೆಹರಿಸಲು ಕಿಸರುವ ಮಾರವಾಡಿ ಅಂಗಡಿಗಳಿಗಿಂತ, ಬಾಯಲ್ಲಿ ಗುಟ್ಕಾ ಇಟ್ಕೊಂಡೂ ಪ್ರತಿಯೊಬ್ಬ ಗಿರಾಕಿಯ ಸಮಸ್ಯೆಗಳನ್ನ ನಿಧಾನವಾಗಿ ಕಣ್ಣಲ್ಲೇ ಆಲಿಸಿ ಅಂಗಡಿಯಿಂದ ಹೊರಬಂದು ಗುಟಕಾ ತುಪ್ಪಿ ನಗುತ್ತ ಮಾತನಾಡಿಸುತ್ತಿದ್ದ ರಫೀಕ ಆತ್ಮೀಯನಂತೆ ಕಾಣುತ್ತಿದ್ದ. ಅವನ ಬಳಿ ಮೊಬೈಲ್ ಕುರಿತಾದ ಯಾವುದೇ ಸಂದೇಹ ಪರಿಹರಿಸಿಕೊಳ್ಳಬಹುದಿತ್ತು. ಆಮಸಣೆ ಇಲ್ಲದ ರಫೀಕ ಬಹುಬೇಗ ಊರಿಗೆಲ್ಲ ಪ್ರಿಯನಾದ.

'ನಂದು ನೆಟ್ಟು ಅದು ಹೇಗೆ ಬ್ಯಾಗ ಖಾಲಿ ಆಗುತ್ತೆ ನೋಡೂ', 'ನಂಗೊಂದು ಲಾಕ್ ಹಾಕಿ ಕೊಡು ಮಾರಾಯ', 'ಅದೇನೋ ಟಿಕ್ ಟಾಕ್ ಇದೆಯಂತಲ್ಲ, ಸ್ವಲ್ಪ ತೋರ್ಸು ನೋಡುವ', 'ನಮ್ಮ ಮನೆ ಹಿತ್ತಲಲ್ಲಿ ಸಿಗ್ನಲ್ ಬರುತ್ತೆ... ಪಡಸಾಲೆಲಿ ಬರಲ್ಲ... ಯಾಕೆ ನೋಡು' – ಹೀಗೆ ನಮ್ಮ ಜನರ ಹೊಸ ಕಾಲದ ಸಂಕಷ್ಟಗಳಿಗೆ ರಫೀಕ ನುರಿತ ವೈದ್ಯನಾಗಿದ್ದ.

ಮೊಬೈಲ್ ಮತ್ತು ಕಡಿಮೆ ಬೆಲೆಯ ಇಂಟರ್ನೆಟ್ ಜಗತ್ತನ್ನೆಲ್ಲ ಸಮ್ಮೋಹನಗೊಳಿಸುತ್ತಿರುವ ಕಾಲದಲ್ಲಿ ಚಂದಾವರ ಸೀಮೆಯ ಅದರ ಅಧಿಕೃತ ವಕ್ತಾರನಂತೆ ರಫೀಕ ಕಾಣುತ್ತಿದ್ದ. ಭಾನುವಾರ ಸಂತೆಯ ದಿನವಂತೂ ಅವನಿಗೆ ಅಂಡು ತುರಿಸಿಕೊಳ್ಳಲೂ ಪುರಸೊತ್ತು ಇರದಂತೆ ಗಿರಾಕಿಗಳು. ಸುತ್ತಲಿನ ಹಳ್ಳಿಗಳಾದ ಸಂತೆಗುಳಿ, ಹೊಸಾಡ, ಕೆಕ್ಕಾರ, ಕಡತೋಕಾ, ಕೂಜಳ್ಳಿ, ಕತ್ರಿ, ಬಡಾಳ ಎಲ್ಲ ಹಳ್ಳಿಗರಿಗೂ ರಫೀಕನ ಅಂಗಡಿಯೇ ಬೇಕು. ದಿನಸಿ ಅಂಗಡಿಯನ್ನೂ ನಾಚಿಸುವಷ್ಟು ವ್ಯಾಪಾರ ರಫೀಕನದು.

ಮೊಬೈಲ್ ಅಂಗಡಿ ಹಾಕಿದ ಒಂದೇ ವರುಷಕ್ಕೆ ರಫೀಕ ಇಡೀ ಸೀಮೆಗೆ ಬೇಕಾದವನಾದ. ಊರಿನ ಪಡ್ಡೆ ಹೈಕಳಂತೂ ಅವನಿಗೆ ಮೊಬೈಲ್ ಮ್ಯಾನ್ ಅಂದೇ ಬಿರುದನ್ನಿಟ್ಟು ಗೌರವಿಸಿದ್ದರು. ಹಳೆಯ ಡಬ್ಬಾ ಮೊಬೈಲ್ ಇಟ್ಟುಕೊಂಡವರೆಲ್ಲ ರಫೀಕನ ಬಳಿಯ ಕಡಿಮೆ ಬೆಲೆಯ ಸ್ಮಾರ್ಟ್ ಫೋನಿಗೆ ಅಪ್‌ಗ್ರೇಡ್ ಆಗಿದ್ದರು. ಬರಗಾಲದ ಈ ಕಾಲದಲ್ಲಿ ಪ್ರತಿಯೊಬ್ಬರ ಮನೆಯಲ್ಲಿ ಕುಡಿಯಲಿಕ್ಕೆ ನೀರಿಲ್ಲದಿದ್ದರೂ ಒಂದು ಸ್ಮಾರ್ಟ್ ಫೋನ್ ಅಂತೂ ಇರುತ್ತಿತ್ತು.

ವಿಷಯ ಇಷ್ಟೇ ಆಗಿದ್ದರೆ ರಫೀಕ ತನ್ನ ಸೋದರ ಮಾವ ದಿಲ್ ದಾರ್‌ನ ಕೈಯಲ್ಲಿ ನಸ್ಲೆ ಹರಾಮ್ ಅನ್ನಿಸಿಕೊಳ್ಳಬೇಕಿರಲಿಲ್ಲ. ಊರಿನವರಿಗೆಲ್ಲ ಮೊಬೈಲ್‌ನ ಹುಚ್ಚು ಹಿಡಿಸಿದ ಮೇಲೆ ಎಲ್ಲ ಕಡೆ ನಡೆಯುವಂತೆ ಈ ಊರಿನಲ್ಲಿಯೂ ಅಡ್ಡ ಪರಿಣಾಮಗಳು ಶುರುವಾದವು. ಅದರಲ್ಲಿ ಚಂದಾವರ ಸೀಮೆಯನ್ನೇ ಬೆಚ್ಚಿ ಬೀಳಿಸಿದ್ದು ಕೂಜಳ್ಳಿಯ ಅನಸೂಯ ತನಗೆ ಮಕ್ಕಳಾಗದ್ದಕ್ಕೆ ರಫೀಕನೇ ಕಾರಣ ಎಂದು ತಗಾದೆ ತೆಗೆದಳು ಎಂದು ಸುದ್ದಿಯಾದದ್ದು.

ಈ ವಿಷಯ ಆಕೆ ಮೊದಲಬಾರಿ ಯಾರ ಬಳಿ ಹೇಳಿದಳು ಎಂಬುದು ಸ್ಪಷ್ಟವಿಲ್ಲ. ಆದರದು ಹೇಗೋ ಗುಸು ಗುಸು ಪಿಸು ಪಿಸು ಆಗಿ ವಾಟ್ಸಾಪ್ಪಿನಲ್ಲೆಲ್ಲ ಹರಿದಾಡಿ ಊರವರ ಮಂಡೆ ಬಿಸಿ ಮಾಡಿದ್ದಂತೂ ಸುಳ್ಳಲ್ಲ. ಮಕ್ಕಳಾಗುವುದಕ್ಕೆ ಕಾರಣ ಈತನೇ ಅಂದರೆ ಅದೊಂದು ತರ. ಮಕ್ಕಳೇ ಆಗದಿರಲು ರಫೀಕ ಹೇಗೆ ಕಾರಣ ಎಂಬುದು ಯಾರಿಗೂ ಹೊಳೆದಂತಿರಲಿಲ್ಲ. ಗಾಸಿಪ್ಪನ್ನು ಜಗಿಯಲು ಲಾಜಿಕ್ ಅವಶ್ಯಕತೆ ಇದೆಯೇ? ಜನರಿಗೋ ಏನೋ ಒಂದು ಸಿಕ್ಕಿದರೆ ಸಾಕು. ಈ ಸುದ್ದಿ ರಫೀಕನ ಕಿವಿಗೆ ಬಿದ್ದದ್ದೂ ಹೌದು. ಅವನೋ ಪಕ್ಕ ಬ್ಯುಸಿನೆಸ್ ಮನುಷ್ಯ. ಇದಕ್ಕೆಲ್ಲ ಕಿವಿ ಕೊಡುತ್ತ ಕೂತರೆ ದಂಧೆಯೇ ಹಾಳು ಎಂದು ಸುಮ್ಮನಿದ್ದ. ಯಾರಾದರೂ ವಿಷಯ ಕೆದಕಿದರೆ 'ದಬಾಲೆಖ್ ಬೈಟ್...' ಎಂದು ಗರಮ್ ಆಗುತ್ತಿದ್ದ. ಅದರ ಪಾಡಿಗೆ ಬಿಟ್ಟಿದ್ದರೆ ವಿಷಯ ಹಾಗೆಯೇ ತೇಲಿ ಹೋಗಿ ಅರಬ್ಬೀ ಸಮುದ್ರ ಸೇರಿ ಕಳೆದುಹೋಗುತ್ತಿತ್ತೇನೋ. ಹಾಗಾಗದೇ ಅದು ಬೇರೆಯದೇ ದಿಕ್ಕನ್ನು ಪಡೆದುಕೊಂಡಿದ್ದು ವಿಧಿಯ ಲೀಲೆ.

***

ಪಡಸಾಲೆಯ ಗೋಡೆ ಗಡಿಯಾರ ಮೂರು ತೋರಿಸುತ್ತಲೇ ಅನಸೂಯ ಕೂತಲ್ಲಿಂದ ಎದ್ದಳು. ಕೊನೆಯ ಬಾರಿಗೆ ಎಂಬಂತೆ ಗಡಿಯಾರವನ್ನೂ ಅದರ ಪಕ್ಕದಲ್ಲೇ ನೇತು ಹಾಕಿದ್ದ ತನ್ನ ಮದುವೆಯ ಪಟವನ್ನೂ ನೋಡುತ್ತ 'ನಾನು ಬರ್ತೇನೆ, ಬಸ್ಸಿಗೆ ಹೊತ್ತಾಯ್ತು' ಎಂದು ಚಪ್ಪಲಿಗೆ ಕಾಲಾದಳು. ದಣಪೆಯ ನಡುವಿನ ಕೆಂಪು ಬಣ್ಣದ ಗೇಟನ್ನು ದಾಟಿ ರಸ್ತೆಗೆ ಕಾಲಿಟ್ಟಳು. ಅವಳ ಹಿಂದೆಯೇ ಬಂದ ಸುರೇಶ ಗೇಟಿನ ಬಳಿ ಬೆಪ್ಪನಂತೆ ನಿಂತ. ಅವನಿಗೆ ಓಲೈಸುವಿಕೆ ತಿಳಿದಿಲ್ಲ. ಮನೆಯನ್ನು ಹಿಂದಕ್ಕೆ ಬಿಟ್ಟು ಅನಸೂಯ ಮುಂದೆ ಹೆಜ್ಜೆ ಹಾಕಿದಂತೆ ಹಿಂದಿ ಸಿನಿಮಾಗಳಂತೆ ಒಮ್ಮೆ ಆಕೆ ತಿರುಗಿ ನೋಡಬಾರದೆ ಎಂದೇ ಅನಿಸಿತು. ಅನಸೂಯಳಿಗೂ ಆ ಗಳಿಗೆಯಲ್ಲಿ ತಾನು ಒಮ್ಮೆ